ಹೊಳೆಯಲಿದೆಯೋ, ಮುಂದೆ ತನ್ನ ಬಾಯಿಂದ ಯಾವ ಪದ ಉದುರಲಿದೆಯೋ ಇದು ಮಾತ್ರ ಈಗ ಸ್ವತಃ ರುದ್ರಣ್ಣನವರಿಗೂ ಗೊತ್ತಿರಲಿಲ್ಲ! ಅವರು ಗೊಂಬೆಯಂತೆ ಸುಮ್ಮನೆ ನಿಂತಿದ್ದಕ್ಕೋ ಏನೋ, ಸಭೆಯ ಮುಂದಿನ ಸಾಲಿನಲ್ಲಿ ಕೂತಿದ್ದ ಮುದುಕರು ಸೋತ ಕೈಯಲ್ಲಿ ಚಪ್ಪಾಳೆ ಹೊಡೆಯತೊಡಗಿದರು... ಈ ಸೋತ ಕೈಗಳ ಚಪ್ಪಾಳೆ ಯಾವ ಕಾರಣಕ್ಕಿರಬಹುದು ಎಂಬುದು ರುದ್ರಣ್ಣನವರಿಗೆ ಹೊಳೆಯಲಿಲ್ಲ. ಗಲಿಬಿಲಿಗೊಂಡು ಗಪ್ ಚುಪ್ಪಾಗಿ, ಕಣ್ಣು ಚೂಪಾಗಿಸಿಕೊಂಡು ಎದುರಿಗೆ ಕೂತಿದ್ದ ಮುದುಕರ ಕಡೆಗೆ ನೋಡಿದರು. ಚಪ್ಪಾಳೆ ಹೊಡೆಯುತ್ತಿದ್ದ ಮುದುಕರ ಮುಖಗಳು ತಮ್ಮ ಕಣ್ಣಳತೆಯಿಂದ ದೂರ ದೂರ ಸರಿಯುತ್ತಿರುವಂತೆ ಕಾಣತೊಡಗಿತು... ಕಾಲು ನಡುಗಿದಂತಾಗಿ ಕುಸಿದು ಬಿದ್ದರು. ರಾತ್ರಿ ಯಾವುದೋ ಜಾವದಲ್ಲಿ ಎಚ್ಚರವಾದಾಗ ತಾನು ಎಲ್ಲಿರುವೆ ಎಂಬುದು ರುದ್ರಣ್ಣನವರಿಗೆ ಏನು ಮಾಡಿದರೂ ಹೊಳೆಯಲಿಲ್ಲ. ಆ ಗೊಂದಲದ ನಡುವೆಯೂ 'ಆಹಾ! ತಾನು ಬದುಕಿ ಬಂದಿದ್ದೇನೆ! ಆ ತಿಳಿಗೇಡಿ ಪ್ರಭುದೇವಸ್ವಾಮಿಯ ಕಾರಣಿಕ ಫೇಲಾಗಿ ಹೋಯ್ತು!' ಎಂದು ನೆಮ್ಮದಿಯ ನಗೆ ನಕ್ಕರು. ಮರುಕ್ಷಣಕ್ಕೇ ದಣಿವಿನಿಂದ ಅವರ ಕಣ್ಣು ಮುಚ್ಚಿಕೊಳ್ಳತೊಡಗಿದರೂ, ಊರಿನಲ್ಲಿ ಬ್ಯಾಂಕ್ ಬ್ಯಾಲೆನ್ಸ್ ಇನ್ನೂ ಕೋಟಿ ರೂಪಾಯಿ ಟಾರ್ಗೆಟ್ ಮುಟ್ಟಿರಲಿಕ್ಕಿಲ್ಲ ಎಂಬುದು ನೆನಪಾಗಿ ಬಲವಂತದಿಂದ ಕಣ್ಣಗಲಿಸಿ ಅಗಲಿಸಿ ಮೇಲೆ ನೋಡಲೆತ್ನಿಸಿದರು. ಬೆಳಗ್ಗೆ ಕಂಡಿದ್ದ ಆ ವಿಭೂತಿ ಹಣೆ ಎಲ್ಲಿ ಹೋಯಿತು ಎಂದು ಏಕಾಏಕಿ ಪುಳಕಗೊಳ್ಳುತ್ತಿರುವಂತೆ ಆ ವಿಭೂತಿ ಮಹಿಳೆಯ ಹಣೆ ಪ್ರಭುದೇವಸ್ವಾಮಿಗಳ ದಟ್ಟ ವಿಭೂತಿಯ ಕರಿ ಹಣೆಯಾಗಿ ಬದಲಾಗತೊಡಗಿದಂತೆ ಕಾಣತೊಡಗಿತು. ಚಿಕ್ಕಂದಿನಿಂದಲೂ ಇಂಥ ಕಗ್ಗಗಳನ್ನೇ ನಂಬಿಕೊಂಡು, ಇವನ್ನೆಲ್ಲ ತಮ್ಮ ಕ್ಲಾಸಿನಲ್ಲಿದ್ದ ಹುಡುಗರ ತಲೆಗೂ ತುಂಬುತ್ತಾ ಅವರಿಗೂ ದಿಗಿಲಿಡಿಸುತ್ತಾ ಖ್ಯಾತಿ ಗಳಿಸಿದ್ದ ರುದ್ರಣ್ಣನವರಿಗೆ 'ಅಯ್ಯಯ್ಯಪ್ಪ! ಪ್ರಭುದೇವಸ್ವಾಮಿಯೇ ಬೆಳಗ್ಗೆ ವಿಭೂತಿ ಮಹಿಳೆಯ ವೇಷದಲ್ಲಿ ಬಂದಿರಬಹುದು!' ಎಂದು ನಿಜಕ್ಕೂ ದಿಗಿಲಾಗಿ ಮೈ ಅದುರತೊಡಗಿತು. ನೋಡನೋಡುತ್ತಲೇ ಆ ವಿಭೂತಿ ಮಹಿಳೆಯ ಹಣೆ ಪ್ರಭುದೇವಸ್ವಾಮಿಗಳ ಹಣೆಯಾಗಿಯೇಬಿಟ್ಟಿತು... ರುದ್ರಣ್ಣನವರ ತಲೆ ಕೆಟ್ಟಂತಾಗಿ ಇದೆಲ್ಲ ಕನಸೋ, ಭ್ರಮೆಯೋ, ನಿಜವೋ ಒಂದೂ ಗೊತ್ತಾಗದೆ, ತಾನು ಕಣ್ಣು ಬಿಟ್ಟಿದ್ದೀನೋ ಇಲ್ಲವೋ ಒಂದೂ ತಿಳಿಯದೆ ಮಂಕಾದರು; ಸರಕ್ಕನೆ ಅವರ ಕಣ್ಣೆದುರು ಕೋಟಿ ರೂಪಾಯಿಯ ಟಾರ್ಗೆಟ್ ಮತ್ತೆ ಪ್ರತ್ಯಕ್ಷವಾಯಿತು. ಈ ಟಾರ್ಗೆಟ್ ಮಾತ್ರವೇ ಇನ್ನಷ್ಟು ವರ್ಷಗಳ ಕಾಲ ತನ್ನ ಜೀವವನ್ನು ಬಿಗಿ ಹಿಡಿದು ನಿಲ್ಲಿಸುವುದು ಸಾಧ್ಯ ಎಂದು ಸಾರಿ ಹೇಳುವಂತೆ ಅದು ಅವರ ಕಣ್ಣೆದುರು ಕುಣಿಯತೊಡಗಿತು.

ಅಂದರೆ... ಈ ಕೋಟಿ ರೂಪಾಯಿಯ ಟಾರ್ಗೆಟ್ ತಮ್ಮ ಕಣ್ಣೆದುರು ಇರುವ ತನಕ ಯಾವ ಪ್ರಭುದೇವಸ್ವಾಮಿಯ ಕಾರಣಿಕವೂ ತಮ್ಮೆದುರು ಏನನ್ನೂ ಕಿಸಿಯಲಾರದು ಎನ್ನುವುದು ರುದ್ರಣ್ಣನವರಿಗೆ ಖಾತ್ರಿಯಾಗತೊಡಗಿತು; ಗೆಲುವಿನ ಸಂಭ್ರಮ ಒಳಗೊಳಗೇ ಪುಟಿಯತೊಡಗಿತು. ಐದು ವರ್ಷದ ಹುಡುಗನಾಗಿದ್ದಾಗಿನಿಂದ ಇವತ್ತಿನವರೆಗೂ ಹಾಗೂ ಹೀಗೂ ಪಾಲಿಸಿಕೊಂಡು ಬಂದಿದ್ದ ಪೂಜೆ, ಭಕ್ತಿಗಳ ಗೊಡ್ಡು ಲೋಕ ಬಿಟ್ಟು ಈಗಿಂದೀಗ ಹೊರ ಬರಲೇಬೇಕು; ಅವ್ವ ಚಿಕ್ಕಂದಿನಿಂದ ಓದಿಸಿ ಗಟ್ಟು ಮಾಡಿಸಿದ್ದ ದೇವರು ದೆಯ್ಯಗಳ ಕಗ್ಗಗಳು, ಹಳ್ಳೀ ಕತೆಗಳು, ನೀತಿ ಕತೆಗಳು ಇವೆಲ್ಲ ತಮ್ಮ ಮನಸ್ಸಿನ ಮೇಲೆ ಕವಿಸಿದ್ದ ಮಂಕು ಪ್ರಭಾವಗಳನ್ನೆಲ್ಲ ಕೊಡವಿಕೊಂಡು ಮೇಲೇಳಬೇಕು... ಅಂದರೆ ತಾನಿನ್ನು ನಿಜಕ್ಕೂ ಹೊಸ ಮನುಷ್ಯನಾಗಬೇಕೆಂದು ರುದ್ರಣ್ಣ ಚಡಪಡಿಸತೊಡಗಿದರು. ಆ ಪ್ರಭುದೇವಸ್ವಾಮಿ ಅಕಸ್ಮಾತ್ ಮುಂದೆ ಎಂದಾದರೂ ಸಿಕ್ಕರೆ, ಇನ್ನು ಹಿಂದಿನಂತೆ ನಿನ್ನ ಕಗ್ಗಗಳನ್ನು, ಪುರಾಣಗಳನ್ನು ಯಾವ ಕಾರಣಕ್ಕೂ ಮುಗ್ಧವಾಗಿ ನಂಬುವುದಿಲ್ಲವೆಂದೂ, ನಾನೀಗ ನಿಜಕ್ಕೂ ವೈಜ್ಞಾನಿಕವಾಗಿ ಯೋಚಿಸಲು ಶುರು ಮಾಡಿದ್ದೇನೆಂದೂ ಮುಖಕ್ಕೆ ಹೊಡೆದಂತೆ